(ಇಂದು ದಿನಾಂಕ:26-03-2026 ರಂದು ಸಾಕ್ಷಿದಾರರನ್ನು ಮಧ್ಯಂತರ ಅರ್ಜಿಯ ಆದೇಶದ ಮೇರೆಗೆ ಪುನಃ ಕರೆಯಿಸಲಾಯಿತು, ಪ್ರಮಾಣ ವಚನ ಬೋಧಿಸಲಾಯಿತು)

**ಮುಂದುವರೆದ ಮುಖ್ಯ ವಿಚಾರಣೆ: ಶ್ರೀಎಸ್ ಬಿ ಅರ್ಜಿದಾರ ಪರ ವಕೀಲರಿಂದ :-**

ನಾನು ದಾಖಲೆಗಳನ್ನು ಹಾಜರುಪಡಿಸಿದ್ದು ಅವುಗಳನ್ನು ಈಗ ನೋಡುತ್ತಿದ್ದೇನೆ. ಸಾಕ್ಷಿಯು ಕೆಳಕಂಡ ದಾಖಲಾತಿಗಳನ್ನು ನೋಡಿ ಗುರುತಿಸಿದ್ದು, ಅವುಗಳನ್ನು ಈ ಕೆಳಕಂಡಂತೆ ನಿಶಾನೆಯಾಗಿ ಗುರುತಿಸಲಾಯಿತು.

| | |
|---|---|
| ನಿ.ಪಿ.12 | ಆಸ್ಪತ್ರೆಯ ಬಿಡುಗಡೆ ಪತ್ರ |
| ನಿ.ಪಿ.13 | ಒಟ್ಟು 3 ಆಸ್ಪತ್ರೆಯ ಬಿಲ್ಲುಗಳು |
| ನಿ.ಪಿ.14 | 2 ಎಕ್ಸ್ ರೇ |

**ಪಾಟೀ ಸವಾಲುಃ ಎದುರುದಾರ ನಂ.3 ರವರ ಪರ ಶ್ರೀ ಜಿ ಎನ್ ವಕೀಲರಿಂದ.**

ನೀವು ಸಂಪೂರ್ಣ ಗುಣಮುಖವಾಗಿದ್ದರಿಂದ ಕಾಲಿಗೆ ಹಾಕಿದ ರಾಡ್‌ನ್ನು ತೆಗೆಸಿರುತ್ತೀರಿ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ವೈದ್ಯರ ಸಲಹೆ ಮೇರೆಗೆ ಬಹಳ ದಿನಗಳವರೆಗೆ ಕಾಲಿನಲ್ಲಿ ರಾಡ್‌ಗಳನ್ನು ಹಾಗೆ ಬಿಟ್ಟರೇ ಅದು ಇನ್‌ಫೆಕ್ಷನ್ ಆಗುತ್ತದೆ ಎಂದು ಹೇಳಿದ್ದರಿಂದ ತೆಗೆಸಿರುತ್ತೇನೆ ಅಂತಾ ಸಾಕ್ಷಿ ನುಡಿಯುತ್ತಾರೆ. ಸಾಮಾನ್ಯವಾಗಿ ಸರ್ಕಾರಿ ಆಸ್ಪತ್ರೆಯಲ್ಲಿ ಈ ಚಿಕಿತ್ಸೆ ಮಾಡಿಸಬಹುದು, ಅಲ್ಲಿ ಇಷ್ಟು ಖರ್ಚು ಆಗುವುದಿಲ್ಲ ಎಂದರೆ ಸರಿಯಲ್ಲ. ನಾನು ಯಾವ ಆಸ್ಪತ್ರೆಯಲ್ಲಿ ಶಸ್ತ್ರ ಚಿಕಿತ್ಸೆ ಮಾಡಿಸಿಕೊಂಡಿರುತ್ತೆನೋ ಅದೇ ಆಸ್ಪತ್ರೆಯಲ್ಲಿ ರಾಡ್ ನ್ನು ತೆಗೆಸಿರುತ್ತೇನೆ. ನೀವು ಈಗ ನಿಮ್ಮ ಕೆಲಸಗಳನ್ನು ನೀವೇ ಮಾಡಿಕೊಳ್ಳುತ್ತೀರಿ ಎಂದರೆ ಸರಿಯಲ್ಲ. ನ್ಯಾಯಾಲಯದ ಮುಂದೆ ಹೆಚ್ಚಿನ ಪರಿಹಾರ ಪಡೆಯಲು ಸುಳ್ಳು ಬಿಲ್ಲುಗಳನ್ನು ಸೃಷ್ಟಿಸಿ ಹಾಜರಪಡಿಸಿರುತ್ತೇನೆ ಎಂದರೆ ಸರಿಯಲ್ಲ. ರಾಡ್‌ನ್ನು ತೆಗೆಸಲು ಕೇವಲ ರೂ.10 ರಿಂದ 20 ಸಾವಿರ

ಖರ್ಚಾಗುತ್ತದೆ, ಆದರೆ ನೀವು ಹಾಜರಪಡಿಸಿದ ಬಿಲ್ಲುಗಳಲ್ಲಿ ಹೆಚ್ಚಿನ ಮೊತ್ತವನ್ನು ಬರೆಯಿಸಿಕೊಂಡು ಬಂದು ಹಾಜರಪಡಿಸಿದ್ದೀರಿ ಎಂದರೆ ಸರಿಯಲ್ಲ. ನನಗೆ ಈಗ ಯಾವುದೇ ಅಂಗನ್ಯೂನ್ಯತೆ ಇಲ್ಲ ಎಂದರೆ ಸರಿಯಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯನ್ನು ವಿಚಾರಿಸಿ ನಂತರ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ. ಸರಿ ಇದೆ,

ಸಹಿ/-
ಹಿರಿಯ ಸಿವಿಲ್ ನ್ಯಾಯಾಧೀಶರು,
ಸಿಂಧನೂರು.